ವಿದೇಶ ಡ್ರಾಫ್ಟ್ ತೆಗೆಯುವ ವಿಳಾಸ:

ಅಲ್-ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್

C. A/c : 010000 82028/00

State Bank of India, Mangalore

ಲೋಕಲ್ ಡ್ರಾಫ್ಟ್ ಮತ್ತು ಚೆಕ್ಕುಗಳು

C. A/c 50

Syndicate Bank, Deralakatte Branch

ಕಾಗದ ಮತ್ತು ಧನ ಸಹಾಯ ನೀಡುವವರು
ಈ ಕೆಳಗಿನ ವಿಳಾಸಕ್ಕೆ ತಲುಪಿಸಿರಿ :

Manager
Al-Madeena Islamic Compex, Manjanady
P. O. Mangalanthi - 575 018
Mangalore - D. K. Karnataka, India.
Phone : (0824) 2287786 Tel & Fax : 2287896
Community Hall : 2288509
Mumbai Office : 022 - 23444994

## INSTITUTIONS

- Al-Madeena Yatheem Khana
- Darul Huda Dars
- Al-Madeena Boarding Madrasa
- Al-Madeena Kuthub-Khana
- Al-Madeena Jeelani Masjid
- Al-Madeena Stitching Centre
- Al-Madeena English Medium School
- Al-Madeena High School
- Al-Madeena Computer Centre
- Al-Madeena Community Hall
- Al-Madeena Shopping Complex



ಕಂಪ್ಯೂಟರ್ ಶಿಕ್ಷಣ ಈ ಕಾಲದಲ್ಲಿ ಅನಿವಾರ್ಯ. ಕಂಪ್ಯೂಟರ್ ಜ್ಞಾನವಿಲ್ಲದಿದ್ದರೆ ಬೇರೆ ಶಿಕ್ಷಣಗಳೆಲ್ಲಾ ಅಪೂರ್ಣವೆನಿಸಿದೆ. ಧಾರ್ಮಿಕ ಜ್ಞಾನಜಗತ್ತಿನಲ್ಲೂ ಕಂಪ್ಯೂಟರ್ ಬಹಳ ಉಪಯುಕ್ತವೆನಿಸಿದೆ. ವಿದ್ವಾಂಸರಿಗೆ ಸಮಕಾಲೀನ ಜನಜೀವನದ ಎಲ್ಲ ಮಜಲುಗಳ ಕುರಿತು ಪ್ರಜ್ಞೆ ಅಗತ್ಯ. ವಿದ್ವಾಂಸರು ಸಮಕಾಲಿಕ ವೈಜ್ಞಾನಿಕ ಪ್ರಗತಿಯೊಂದಿಗೆ ಸ್ಪಂದಿಸುತ್ತಿರಬೇಕೆನ್ನುವುದು ಇಸ್ಲಾಮಿನ ಆಶಯ. ಇದು ಪೂರ್ವಿಕ ವಿದ್ವಾಂಸರ ಚರ್ಯೆ ಕೂಡಾ. ಹಿಂದಿನ ಪರಿಸ್ಥಿತಿಯಲ್ಲಿ ಅತ್ಯಂತ ಪ್ರಬಲ, ಉಪಯುಕ್ತ ಮಾಧ್ಯಮವೆನಿಸಿದ ಕಂಪ್ಯೂಟರಿನಲ್ಲಿ ಹಿಂದಿನ ವಿದ್ವಾಂಸರಿಗೆ ಅನಿವಾರ್ಯವೆನ್ನುವುದನ್ನು ಮನಗಂಡು **ಅಲ್-ಮದೀನಾ ಕಂಪ್ಯೂಟರ್ ತರಬೇತಿ ಕೇಂದ್ರ**ವನ್ನು ಸ್ಥಾಪಿಸಲಾಯಿತು. ಮುತಅಲ್ಲಿಮರ ಸಮೇತ ಸ್ಥಾಪನೆಯ ಎಲ್ಲಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ.

## ಕಮ್ಯೂನಿಟಿ ಹಾಲ್



ದೇರಳಕಟ್ಟೆ-ಕೊಣಾಜೆಗಳ ನಡುವೆ ಮಂಗಳೂರು ಯೂನಿವರ್ಸಿಟಿ ರಸ್ತೆಗೆ ತಾಗಿಕೊಂಡಿರುವ ತಿಬ್ಲೆಪದವು ಎಂಬಲ್ಲಿ ಅಲ್-ಮದೀನಾ ಕಮ್ಯೂನಿಟಿ ಹಾಲನ್ನು ಸ್ಥಾಪಿಸಲಾಗಿದೆ. ಮದುವೆ ಮತ್ತಿತರ ಸಭೆ ಸಮಾರಂಭಗಳು ಸುಂದರ ಪರಿಸರದಲ್ಲಿ ಸುವ್ಯವಸ್ಥಿತವಾಗಿ ನಡೆಯುವಂತೆ ಇದನ್ನು ಸ್ಥಾಪಿಸಲಾಗಿದೆ. ಸಮಾರಂಭದಲ್ಲಿ ಭಾಗವಹಿಸುವ ಜನರಿಗೆ ನಮಾಜ್ ತಪ್ಪಿ ಹೋಗದಂತೆ ಪುರುಷರಿಗೆ ಪಕ್ಕದಲ್ಲೇ ಮಸೀದಿಯನ್ನು ಸ್ಥಾಪಿಸಲಾಗುತ್ತಿದೆ. ಮಹಿಳೆಯರಿಗಾಗಿ ಹಾಲ್‌ನ ಮೇಲಂತಸ್ತಿನಲ್ಲಿ ನಮಾಜ್ ಮಾಡುವ ಸೌಕರ್ಯವಿದೆ. ಪ್ರಸ್ತುತ ಹಾಲ್ ಅಲ್-ಮದೀನಾ ಸಮಾಜಕ್ಕೆ ನೀಡುವ ಕೊಡುಗೆಯಾಗುವುದರೊಂದಿಗೆ ಸಮಾಜದಿಂದ ಸಂಸ್ಥೆಗೊಂದು ಪುಟ್ಟ ಆದಾಯ ಮಾರ್ಗವೂ ಆಗಲಿದೆ.

ಪ್ರಗತಿಯ ಹಂತದಲ್ಲಿರುವ ಈ ಸಂಸ್ಥೆಯನ್ನು ಸಂರಕ್ಷಿಸುವುದು ಹಾಗೂ ಇದರ ಅಭಿವೃದ್ಧಿಗಾಗಿ ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು ಇದರ ಪ್ರಗತಿಗಾಗಿ ನಿಮ್ಮಿಂದ ಉದಾರ ಸಹಾಯವನ್ನು ಅಪೇಕ್ಷಿಸುತ್ತಿದ್ದೇವೆ. ನವ ಉದ್ಯೋಗ, ವ್ಯಾಪಾರ ವಹಿವಾಟು, ಮಗು ಜನಿಸಿದಾಗ, ಮನೆ ಕಟ್ಟಿಸಿದರೆ ಅಥವಾ ಕಟ್ಟುವಾಗ ಈ ಸ್ಥಾಪನೆಯ ಬಗ್ಗೆ ಸದಾ ನೆನಪಿರಲಿ.

ಯತೀಮರಿಗೆ ನೆರವಾಗುವವರು ನನ್ನ ಜೊತೆ ಸ್ವರ್ಗದಲ್ಲಿರುವರೆಂದು ಪ್ರವಾದಿಯವರು (ಸ) ಪ್ರಸ್ತಾಪಿಸಿದ್ದಾರೆ. ಯತೀಂ ಮಗುವಿನ ತಲೆ ಮೇಲೆ ವಾತ್ಸಲ್ಯದಿಂದ ಕೈ ಸವರಿದವರಿಗೆ ಆ ತಲೆಗೂದಲುಗಳ ಸಂಖ್ಯೆಯಲ್ಲಿ ಅಲ್ಲಾಹು ಪುಣ್ಯಗಳನ್ನು ದಯಪಾಲಿಸುವನೆಂದು ಹದೀಸ್‌ನಲ್ಲಿದೆ. ಕೇವಲ ವಾತ್ಸಲ್ಯಕ್ಕೆ ಇಷ್ಟು ಪುಣ್ಯವಿದ್ದರೆ ಯತೀಮರಿಗೆ ಆಶ್ರಯ, ಅನ್ನ, ವಸ್ತ್ರ, ಶಿಕ್ಷಣಕ್ಕೆ ನೆರವಾಗುವುದರ ಪುಣ್ಯಗಳ ಅಪಾರತೆಯನ್ನು ಮನಗಾಣಬಹುದಾಗಿದೆ. ಈ ಭಾಗ್ಯವು ನಿಮ್ಮದಾಗಲಿ.

ಅಲ್-ಮದೀನಾದ ಅಭಿವೃದ್ಧಿಯ ಹಿಂದೆ ಊರ ಹಾಗೂ ಪರವೂರಿನ ಅಪಾರ ಜನರ ನಿಷ್ಕಳಂಕ ಸೇವೆ ಹಾಗೂ ಪ್ರಾಮಾಣಿಕ ಪ್ರಯತ್ನ ಅಡಗಿದೆ. ಅವರೆಲ್ಲರಿಗೂ ಸರ್ವಶಕ್ತನಾದ ಅಲ್ಲಾಹು ಆಯುರಾರೋಗ್ಯ ಮತ್ತು ಅನುಗ್ರಹವನ್ನು ಕರುಣಿಸಲಿ. ಆಮೀನ್.

ಪಿ. ಎಂ. ಅಬ್ಬಾಸ್ ಮುಸ್ಲಿಯಾರ್
ಅಧ್ಯಕ್ಷರು

## ಯತೀಂ ಮಕ್ಕಳ ದೈನಂದಿನ ಆಹಾರ ವೆಚ್ಚ ವಿವರ

| | ಪ್ರತೀ ಯತೀಂಗೆ | 111ಯತೀಂಗೆ |
|---|---|---|
| ಬೆಳಗ್ಗೆ ಚಾ, ತಿಂಡಿ | 3.00 | 333.00 |
| ಬೆಳಗ್ಗಿನ ಉಪಹಾರ | 8.00 | 888.00 |
| ಮಧ್ಯಾಹ್ನದ ಊಟ | 9.00 | 999.00 |
| ಸಂಜೆ ಚಾ, ತಿಂಡಿ | 3.50 | 388.50 |
| ರಾತ್ರಿ ಊಟ | 9.00 | 999.00 |
| ಒಟ್ಟು | 32.50 | 3607.50 |

## ಉತ್ತಮ ದರ್ಜೆಯ ಆಹಾರ

| | ಪ್ರತೀ ಯತೀಂಗೆ | 111 ಯತೀಂಗೆ |
|---|---|---|
| ಪರೋಟ ಮತ್ತು ಬೀಫ್ | 15.00 | 1665.00 |
| ತುಪ್ಪಾನ್ನ ಮತ್ತು ಬೀಫ್ | 18.00 | 1998.00 |
| ತುಪ್ಪಾನ್ನ ಮತ್ತು ಕೋಳಿ | 22.00 | 2442.00 |
| ತುಪ್ಪಾನ್ನ ಮತ್ತು ಮಟನ್ | 25.00 | 2775.00 |
| ಬೀಫ್ ಬಿರಿಯಾನಿ | 20.00 | 2220.00 |
| ಕೋಳಿ ಬಿರಿಯಾನಿ | 25.00 | 2775.00 |
| ಮಟನ್ ಬಿರಿಯಾನಿ | 28.00 | 3108.00 |

## ರಮಳಾನ್ ಆಹಾರ

| | ಪ್ರತೀ ಯತೀಂಗೆ | 111 ಯತೀಂಗೆ |
|---|---|---|
| ಇಫ್ತಾರ್ | 26.00 | 2886.00 |
| ಸಹರಿ | 15.00 | 1665.00 |
| ಒಂದು ಜೋಡಿ ವಸ್ತ್ರ | 400.00 | 44,400.00 |

**ಪ್ರತಿ ಯತೀಂಗೆ ತಗಲುವ ವಾರ್ಷಿಕ ವೆಚ್ಚ - 13,500.000**

## ಅಲ್-ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್

ಮಂಗಳೂರಿನಿಂದ ಸುಮಾರು 20ಕಿ. ಮಿ. ದೂರದ ಮಂಜನಾಡಿಯ ಪ್ರಕೃತಿ ಸೌಂದರ್ಯದ ಮಧ್ಯೆ ಎತ್ತರದ ಗುಡ್ಡದ ತುದಿಯಲ್ಲಿ ಸುಮಾರು 20ಎಕ್ರೆಯ ಭೂಮಿಯಲ್ಲಿ ಯತೀಂಖಾನ, ಬೋರ್ಡಿಂಗ್ ಮದ್ರಸಾ, ದಾರುಲ್ ಹುದಾ ದರ್ಸ್, ಖುತುಬ್ ಖಾನ ಆಂಗ್ಲಮಾಧ್ಯಮ ಶಾಲೆ, ಪ್ರೌಢಶಾಲೆ ಇತ್ಯಾದಿಗಳನ್ನೊಳಗೊಂಡು ತಲೆ ಎತ್ತಿ ನಿಂತಿರುವ ಬೃಹತ್ ಸ್ಥಾಪನೆಯೇ ಅಲ್-ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್.

ಅಹ್ಲುಸುನ್ನತ್ ವಲ್-ಜಮಾಅತಿನ ಆಶಯಾದರ್ಶಗಳಲ್ಲಿ ಸಮುದಾಯಕ್ಕೆ ಧಾರ್ಮಿಕ, ಲೌಕಿಕ ವಿದ್ಯಾಭ್ಯಾಸ ನೀಡುವ ಉದ್ದೇಶದಿಂದ 1994 ಮಾರ್ಚ್17ರಂದು ಸಮಿತಿ ರಚಿಸಲ್ಪಟ್ಟು ಶಿಲಾನ್ಯಾಸ ನಿರ್ವಹಿಸಲ್ಪಟ್ಟ ಧಾರ್ಮಿಕ ಸಂಸ್ಥೆಯಾಗಿದೆ ಅಲ್-ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್. 11ಯತೀಂ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಸ್ಥಾಪನೆಯಲ್ಲಿ ಇದೀಗ 700 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

### ಅಲ್ - ಮದೀನಾ ಯತೀಂಖಾನ




ಅಲ್-ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್‌ನ ಆಶ್ರಯದಲ್ಲಿರುವ ಅಲ್-ಮದೀನಾ ಯತೀಂಖಾನದಲ್ಲಿ 111 ಯತೀಮ್ ವಿದ್ಯಾರ್ಥಿಗಳು ವಿದ್ಯಾರ್ಜನೆಗೈಯುತ್ತಿದ್ದಾರೆ.

ಅನಾಥರ ಸಂರಕ್ಷಕರಿಗೆ ಇರುವ ಸ್ಥಾನೋನ್ನತಿಗಳು ಶ್ರೇಷ್ಠಮಟ್ಟದ್ದಾಗಿವೆ ಎಂಬ ಪ್ರವಾದಿ ಬೋಧನೆಯು ಉಲ್ಲೇಖಾರ್ಹ. ಅನಾಥತೆಯ ಸೀಮಾ ರೇಖೆಯ ಆಚೆಗೆ ದೃಷ್ಟಿ ಹಾಯಿಸುವ ಈ ಅನಾಥರಿಗೆ ಸಮಾಜದ ಸ್ನೇಹ, ಭ್ರಾತೃತ್ವ, ಸಹಕಾರ ಬೇಕಾಗಿದೆ. ನಾಳೆಯ ಕುರಿತ ಅವರ ನಿರೀಕ್ಷೆಯನ್ನೂ ಕನಸನ್ನೂ ಸಾಕ್ಷಾತ್ಕಾರಗೊಳಿಸಲು ನೆರವಾಗಬೇಕಾಗಿದೆ.

ನಿಮ್ಮ ಉದ್ದೇಶ ಸಫಲೀಕರಣಕ್ಕೆ, ಮಾನಸಿಕ, ದೈಹಿಕ, ಆರ್ಥಿಕ ತೊಂದರೆಗಳ ನಿವಾರಣೆಗೆ, ಐಶ್ವರ್ಯ ಭರಿತ ಜೀವನಕ್ಕೆ, ಸಂಪತ್ತು ಸಮೃದ್ಧಿಗೆ ನಿಷ್ಕಳಂಕ ಮನಸ್ಕರಾದ ಯತೀಂ ಮಕ್ಕಳೊಂದಿಗೆ ಪ್ರಾರ್ಥನೆ ಮಾಡಲು ನಿಮ್ಮನ್ನು ಕುಟುಂಬ ಸಮೇತರಾಗಿ ಆಹ್ವಾನಿಸುತ್ತಿದ್ದೇವೆ ಅಲ್-ಮದೀನಾ ಯತೀಂಖಾನಕ್ಕೆ.

## ದಾರುಲ್ ಹುದಾ ದರ್ಸ್

ಪ್ರವಾದಿ ಮುಹಮ್ಮದ್ ಮುಸ್ತಫಾ (ಸ. ಅ) ರವರಿಂದ ಸರಣಿ ಸರಣಿಯಾಗಿ ತಲುಪಿದ ಪವಿತ್ರ ದೀನುಲ್ ಇಸ್ಲಾಮನ್ನು ಅದರ ಯಥಾರ್ಥ ಕ್ರಮದಲ್ಲಿ ಊರ್ಜಿತಗೊಳಿಸಲು ಪ್ರವರ್ತನ ಹೆಜ್ಜೆಯಲ್ಲಿರುವ ಅಲ್-ಮದೀನಾದ ಎರಡನೇ ಹಂತವೇ ದಾರುಲ್ ಹುದಾ ದರ್ಸ್.

ಇಲ್ಲಿ ವಿದ್ಯಾರ್ಜನೆಗೈಯ್ಯುತ್ತಿರುವ ವಿದ್ಯಾರ್ಥಿಗಳ (ಮುತಅಲ್ಲಿಂ) ಆಹಾರ ಸಹಿತ ಎಲ್ಲಾ ಖರ್ಚುಗಳನ್ನೂ ಅಲ್-ಮದೀನಾ ಭರಿಸುತ್ತಿದೆ. ನಿರ್ಮಾಣ ಹಂತದಲ್ಲಿರುವ ಮಸೀದಿಯಲ್ಲಿ ಸ್ಥಳವಕಾಶದ ಕೊರತೆಯ ಕಾರಣದಿಂದ ಸೀಮಿತ ವಿದ್ಯಾರ್ಥಿಗಳಿಗೆ ಮಾತ್ರವೇ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದ್ದು ಸ್ಥಳವಕಾಶ ವ್ಯವಸ್ಥೆಯ ಬಳಿಕ ನೂರು ವಿದ್ಯಾರ್ಥಿಗಳ ಉನ್ನತ ದರ್ಸನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

### ಬೋರ್ಡಿಂಗ್ ಮದ್ರಸಾ




ಅನುಕೂಲಸ್ಥರಿಗೆ ವ್ಯವಹಾರಗಳ ಗುಂಗಿನಲ್ಲಿ ಮಕ್ಕಳ ಮತ-ಭೌತಿಕ ಶಿಕ್ಷಣದಲ್ಲಿ ಗಮನ ಹರಿಸಲು ಸಾಧ್ಯವಾಗುವುದಿಲ್ಲ. ಅಂತಹ ಮಕ್ಕಳು ಕಲುಷಿತ ಪರಿಸ್ಥಿತಿಯಲ್ಲಿ ಧರ್ಮದ ಎಲ್ಲೆ ಮೀರಿ ಬೆಳೆಯುತ್ತಾರೆ. ಟಿ.ವಿ., ಸಿನೆಮಾ, ಕೆಟ್ಟವರ ಸಹವಾಸ, ಮುಂತಾದ ಹದಗೆಟ್ಟ ಪರಿಸರದ ಕೂಸುಗಳಾಗಿ ಹಾಳಾಗುತ್ತಾರೆ. ಇಂತಹ ಸನ್ನಿವೇಶಗಳಿಂದ ಮುಕ್ತವಾಗಿ ಇಸ್ಲಾಮಿನ ಸುಂದರ ಪರಿಸರದಲ್ಲಿ ಬೆಳೆಯುತ್ತಾ ಮತ-ಭೌತಿಕ ಶಿಕ್ಷಣ ಪಡೆಯುವಂತಹ **ಬೋರ್ಡಿಂಗ್ ಮದ್ರಸವೇ** ಈ ಸಮಸ್ಯೆಗೆ ಪರಿಹಾರೋಪಾಯ. ಈ ಸದಾಶಯದಿಂದ ಸ್ಥಾಪಿಸಲಾದ **ಅಲ್-ಮದೀನಾ ಬೋರ್ಡಿಂಗ್ ಮದ್ರಸವು** ನಿರೀಕ್ಷೆಗೂ ಮೀರಿದ ಶೈಕ್ಷಣಿಕ ಫಲಿತಾಂಶವನ್ನು ನೀಡುತ್ತಿದ್ದು ಜನಮನ್ನಣೆಗೆ ಪಾತ್ರವಾಗಿದೆ.

### ಸೆಕೆಂಡರಿ ಮದ್ರಸ

ಸಮಸ್ತ ಕೇರಳ ಸುನ್ನೀ ವಿದ್ಯಾಭ್ಯಾಸ ಬೋರ್ಡು ಅಂಗೀಕೃತ ಸಿಲೆಬಸ್ ಪ್ರಕಾರ ಜೂನ್ ತಿಂಗಳಿನಲ್ಲಿ ಆರಂಭಗೊಂಡು ಏಪ್ರಿಲ್‌ನಲ್ಲಿ ವಾರ್ಷಿಕ ಪರೀಕ್ಷೆ ನಡೆಯುವ ಪದ್ಧತಿಯಲ್ಲಿ ಯತೀಂಖಾನ ಹಾಗೂ ಬೋರ್ಡಿಂಗ್ ಮದ್ರಸಾ ವಿದ್ಯಾರ್ಥಿಗಳು ಕಲಿಯುವ ಸಂಸ್ಥೆಯೇ **ಸೆಕೆಂಡರಿ ಮದ್ರಸ**.

## ಖುತುಬ್ ಖಾನ (ಲೈಬ್ರರಿ)

ಸಮುದಾಯದ ಎಲ್ಲಾ ವಿದ್ವಾಂಸರಿಗೂ ಉಪಯುಕ್ತವಾಗುವ ರೂಪದಲ್ಲಿ ಎಲ್ಲಾ ವಿಷಯಗಳಲ್ಲೂ ಸಮಗ್ರ ಅಧ್ಯಯನಕ್ಕೆ ಬೇಕಾದ ಗ್ರಂಥಗಳನ್ನೊಳಗೊಂಡ ಅಲ್-ಮದೀನಾದ ಅತಿ ಮುಖ್ಯಘಟಕವೇ ಖುತುಬ್‌ಖಾನ. ಈಗಾಗಲೇ ಸುಮಾರು ಮೂರು ಲಕ್ಷಗಳಿಗೂ ಹೆಚ್ಚಿನ ಮೌಲ್ಯದ ಮುನ್ನೂರಕ್ಕಿಂತಲೂ ಅಧಿಕ ಗ್ರಂಥಗಳಿದ್ದು ಎಲ್ಲಾ ಜನರಿಗೂ ಉಪಯುಕ್ತವಾಗುವಂತೆ ಸೌಕರ್ಯಗಳನ್ನು ನಿರೂಪಿಸಲಾಗಿದೆ.

## ಜೀಲಾನಿ ಮಸ್ಜಿದ್




ನಮ್ಮ ಸಂಸ್ಥೆಯ ಹಾಗೂ ಆಸುಪಾಸಿನವರ ಅವಶ್ಯಕತೆಗನುಸಾರವಾಗಿ ಶುಕ್ರವಾರದ ಜುಮುಅ ಸಹಿತ ಎಲ್ಲಾ ನಮಾಜನ್ನು ನಿರ್ವಹಿಸಲು ಉಪಯುಕ್ತವಾದ ಭವ್ಯ ಮಸೀದಿಯೇ ಜೀಲಾನಿ ಮಸ್ಜಿದ್. ಈಗಾಗಲೇ ಸುಮಾರು 800 ಜನರಿಗೆ ಸಮಾಜಿಕ ಸೌಕರ್ಯವಿದ್ದು, ಹಲವು ಅವಶ್ಯಕತೆಗಳಿಗನುಸಾರವಾಗಿ ಮಸೀದಿಯನ್ನು ವಿಸ್ತರಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

## ಟೈಲರಿಂಗ್ ತರಬೇತಿ ಕೇಂದ್ರ

ಅಲ್-ಮದೀನಾ ಮಕ್ಕಳಿಗೆ ಇಲ್ಲಿನ ಶಿಕ್ಷಣ ಮುಗಿದ ನಂತರವೂ ಹೆಚ್ಚಿನ ಶಿಕ್ಷಣಕ್ಕಾಗಿ (ಹೊರಗಡೆ) ಸಹಕಾರ ನೀಡಲಾಗುತ್ತದೆ. ಆದರೆ ನಿರುದ್ಯೋಗ ಸಮಸ್ಯೆ ತೀವ್ರವಾಗಿರುವ ನಮ್ಮ ದೇಶದಲ್ಲಿ ಸುಶಿಕ್ಷಿತರಿಗೆ ಉದ್ಯೋಗ ದೊರಕುವ ಭರವಸೆಯಿಲ್ಲ. ಆದ್ದರಿಂದ ಸ್ಥಾಪನೆಯ ಮಕ್ಕಳು ಮುಂದೆ ಉದ್ಯೋಗ ದೊರೆಯದಿದ್ದರೂ ಕೂಡಾ ಸ್ವಾವಲಂಬಿ ಬದುಕಿಗೆ ನೆರವಾಗುವ ಸ್ವೋದ್ಯೋಗವನ್ನು ಅವಲಂಬಿಸಲು ಸಾಧ್ಯವಾಗಬೇಕೆಂಬ ಉದ್ದೇಶದಿಂದ ವೃತ್ತಿಪರ ಶಿಕ್ಷಣ ನೀಡಲಾಗುತ್ತಿದೆ. ಅಲ್-ಮದೀನಾ ಟೈಲರಿಂಗ್ ಕೇಂದ್ರ ಇದರಲ್ಲೊಂದು. ಸ್ಥಾಪನೆಯ ವಿದ್ಯಾರ್ಥಿಗಳಿಗೆ ಇಲ್ಲಿ ಉಚಿತ ತರಬೇತಿ ನೀಡಲಾಗುತ್ತಿದೆ.

## ಇಂಗ್ಲೀಷ್ ಮೀಡಿಯಂ ಸ್ಕೂಲ್




ಆಂಗ್ಲ ಮಾಧ್ಯಮದ ಹೆಸರಲ್ಲಿ ಕೆಲವು ಶಾಲೆಗಳು ಮುಸ್ಲಿಂ ಮಕ್ಕಳನ್ನು ಹಾದಿ ತಪ್ಪಿಸುವ ಯತ್ನ ನಡೆಸುತ್ತಿರುವ ಹಿನ್ನಲೆಯಲ್ಲಿ ಅಲ್-ಮದೀನಾ ಮ್ಯಾನೇಜ್‌ಮೆಂಟ್ 2000ನೇ ಶೈಕ್ಷಣಿಕ ವರ್ಷದಲ್ಲಿ ಅಲ್-ಮದೀನಾ ಇಂಗ್ಲೀಷ್ ಮೀಡಿಯಂ ಸ್ಕೂಲನ್ನು ಪ್ರಾರಂಭಿಸಿದೆ.

ಜಾತಿ-ಮತ ಭೇದವಿಲ್ಲದೆ ಪ್ರವೇಶ ನೀಡಲಾಗುತ್ತಿರುವ ಪ್ರಸ್ತುತ ಶಾಲೆಯಲ್ಲಿ ಮುಸ್ಲಿಂ ಮಕ್ಕಳಿಗೆ ಮದರಸ ಶಿಕ್ಷಣ ಮತ್ತು ಧಾರ್ಮಿಕ ಶಿಷ್ಟಾಚಾರಗಳ ತರಬೇತಿಗೆ ಪ್ರತ್ಯೇಕ ಸೌಲಭ್ಯವಿದೆ.

ಸುಮಾರು 300 ಮಕ್ಕಳನ್ನು ಹೊಂದಿರುವ ಈ ವಿಭಾಗ ಮುಸ್ಲಿಮರಿಗೆ ಪ್ರತ್ಯೇಕವಾಗಿ ಶಿಕ್ಷಣವನ್ನು ನೀಡುತ್ತಾ ಸಮುದಾಯಕ್ಕೆ ಮಾದರಿಯಾಗಿ ಬೆಳೆದು ನಿಂತ ಸಂಸ್ಥೆ ಇದಾಗಿದೆ.

## ಪ್ರೌಢಶಾಲೆ




ಅಲ್-ಮದೀನಾ ವಿದ್ಯಾಕ್ಯಾಂಪಸ್ಸಿನೊಳಗಿನ ಮತ್ತೊಂದು ಮುಖ್ಯ ಸಂಸ್ಥೆಯಿದು. ಅಲ್-ಮದೀನಾ ಯತೀಂಖಾನಾ, ಬೋರ್ಡಿಂಗ್ ಮದ್ರಸದ ವಿದ್ಯಾರ್ಥಿಗಳು ಹಾಗೂ ಪರಿಸರದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರಾಥಮಿಕ ಶಿಕ್ಷಣ ಮುಗಿಸಿ ಪ್ರೌಢಶಿಕ್ಷಣಕ್ಕಾಗಿ ದೂರ ಹೋಗಬೇಕಾದ ಸ್ಥಿತಿಯನ್ನು ತಪ್ಪಿಸುವುದು, ಉತ್ತಮ ವಾತಾವರಣದಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು, ಮುಸ್ಲಿಂ ಮಕ್ಕಳಿಗೆ ಧಾರ್ಮಿಕ ಪರಿಸರವನ್ನು ಒದಗಿಸುವುದು ಅಲ್-ಮದೀನಾ ಪ್ರೌಢಶಾಲೆಯ ಸ್ಥಾಪಿತ ಧ್ಯೇಯ. ಎರಡು ವರ್ಷಗಳಿಂದ ಚೆನ್ನಾಗಿ ನಡೆದು ಬರುತ್ತಿದ್ದು ಮುಸ್ಲಿಂ ವಿದ್ಯಾರ್ಥಿನಿಯರಿಗೆ ಇಸ್ಲಾಮೀ ಪರ್ದಾವನ್ನು ಸಮವಸ್ತ್ರವಾಗಿ ಅಂಗೀಕರಿಸಲಾಗಿದೆ. ಅವರಿಗೆ ಧಾರ್ಮಿಕ, ನೈತಿಕ ಶಿಕ್ಷಣವನ್ನು ಬೋಧಿಸುವ ಪ್ರತ್ಯೇಕ ತರಗತಿಗಳನ್ನು ನಡೆಸಿಕೊಂಡು ಬರಲಾಗುತ್ತಿದ್ದು ನಮಾಜ್ ಮಾಡುವ ಪ್ರತ್ಯೇಕ ಸ್ಥಳದ ಸೌಕರ್ಯವಿದೆ.

## ಕಂಪ್ಯೂಟರ್ ತರಬೇತಿ ಕೇಂದ್ರ

